ಇತ್ಯರ್ಥಪಡಿಸಲು ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿಗೆ ಒಬ್ಬರು ಪರ್ಯಾವೇಕ್ಷಕರು ಮತ್ತು ಒಬ್ಬರು ಭೂಮಾಪಕರನ್ನು ತಾತ್ಕಾಲಿಕವಾಗಿ ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ. ಸಾರ್ವಜನಿಕರಿಂದ ಇದುವರೆಗೂ ಸುಮಾರು 2516 ಅರ್ಜಿಗಳು ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ ಸ್ವೀಕೃತಿಯಾಗಿದ್ದು, ಈ ಪೈಕಿ 218 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸುಮಾರು 6 ತಿಂಗಳ ಕಾಲಾವಕಾಶ ಬೇಕಾಗಬಹುದು.

ಮರು ಭೂಮಾಪನದ ಲೋಪದೋಷಗಳನ್ನು ಸರಿಪಡಿಸಲು ಅಗತ್ಯವಿದ್ದಲ್ಲಿ ಇನ್ನೂ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿಕೊಂಡು ಶೀಘ್ರವಾಗಿ ಇತ್ಯರ್ಥಪಡಿಸಲು ಭೂದಾಖಲೆಗಳ ಉಪ ನಿರ್ದೇಶಕರುರವರಿಗೆ ಸೂಚನೆಯನ್ನು ನೀಡಲಾಗಿದೆ.

ಮುತ್ತುರಾಯನ ಕೆರೆ ಪೋಷಕ ನಾಲೆ

694(1322) ಶ್ರೀಮತಿ ಕಲ್ಪನಾ ಸಿದ್ಧರಾಜು:(ಮದ್ದೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮದ್ದೂರು ತಾಲ್ಲೂಕಿನ ಆತಗೂರು ಹೋಬಳಿಯ ಹೂತಗೆರೆ ಮತ್ತು ಇತರೆ ಗ್ರಾಮಗಳ ಮುತ್ತುರಾಯನಕೆರೆ ಪೋಷಕ ನಾಲಾ ನಿರ್ಮಾಣಕ್ಕಾಗಿ ಎಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ (ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ವಶಪಡಿಸಿಕೊಂಡಿರುವ ಎಲ್ಲಾ ಜಮೀನಿನ ಮಾಲೀಕರಿಗೆ ಪರಿಹಾರ ಹಣ ನೀಡಲಾಗಿದೆಯೇ;

(ಇ) ಹಾಗಿಲ್ಲದಿದ್ದಲ್ಲಿ, ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮಾಲೀಕರಿಗೆ ಇನ್ನೂ ಪರಿಹಾರ ಹಣ ನೀಡದೆ ಇರುವುದರಿಂದ, ಜಮೀನುಕಳೆದುಕೊಂಡ ರೈತರು ಸಂಕಷ್ಟಕ್ಕಿಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಪರಿಹಾರವನ್ನು ನೀಡಲು ವಿಳಂಬವಾಗಲು ಕಾರಣಗಳೇನು;

(ಊ) ಜಮೀನಿನ ಮಾಲೀಕರಿಗೆ ಪರಿಹಾರ ನೀಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ; (ಮಾಹಿತಿ ನೀಡುವುದು)

ಶ್ರೀ ಕೆ ಕರುಣಾಕರರೆಡ್ಡಿ(ಕಂದಾಯ ಸಚಿವರು)

(ಅ) 50 ಎಕರೆ 13 ಗುಂಟೆ 12 ಆಣೆ ವಿಸ್ತೀರ್ಣ ಮತ್ತು 1985 ಚದರ ಅಡಿ ಜಮೀನುಗಳನ್ನು ಭೂಸ್ವಾಧೀನಪಡಿಸಿರುತ್ತದೆ.

(ಅ) ಪರಿಹಾರವನ್ನು ಈಗಾಗಲೇ ಪಡೆದವರ ಮತ್ತು ಇನ್ನು ಪರಿಹಾರ ಪಡೆಯಬೇಕಿರುವ ಭೂಮಾಲಿಕರ ವಿವರ ಕೆಳಕಂಡಂತಿದೆ:

ಕ್ರ ಸಂ.	ಗ್ರಾಮದ ಹೆಸರು	ಖಾತೆದಾರರ ಸಂಖ್ಯೆ	ಹಕ್ಕು ದಾಖಲಾತಿಗಳನ್ನು ಸಲ್ಲಿಸಿ ಪರಿಹಾರ ಪಡೆದವರು	ಹಕ್ಕು ದಾಖಲೆ ಸಲ್ಲಿಸದೇ ಇರುವ ಖಾತೆದಾರರು
1	2	3	4	5
1	ನವಿಲೆ, ಹೆಬ್ಬರಳು ಮತ್ತು ಅಂಕನಾಥಪುರ	125	49	76
2	ಕೆಸ್ತೂರು	33	17	16
3	ಎರಗನಹಳ್ಳಿ, ಹೆಮ್ಮನಹಳ್ಳಿ, ಹನುಮಂತಪುರ ಮತ್ತು ಕಡಲೂರು	66	16	50
4	ಹೂತಗೆರೆ	71	ಪರಿಹಾರವನ್ನು ಪಡೆಯಲು ಅರ್ಜಿ ಹಾಗೂ ಹಕ್ಕು ದಾಖಲಾತಿಗಳನ್ನು ಯಾರು ಸಲ್ಲಿಸಿರುವುದಿಲ್ಲ	

(ಇ) ಬಂದಿರುವುದಿಲ್ಲ.

(ಈ) ಭೂಮಾಲೀಕರು ಹಕ್ಕು ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಪರಿಹಾರ ಪಾವತಿಸಲು ವಿಳಂಬವಾಗಿರುತ್ತದೆ.

(ಉ) ಉಳಿದ ಭೂಮಾಲೀಕರು ಅಗತ್ಯ ಹಕ್ಕು ದಾಖಲೆಗಳನ್ನು ಹಾಜರುಪಡಿಸಿದ ಕೂಡಲೇ ಪರಿಶೀಲಿಸಿ ಆದ್ಯತೆ ಮೇರೆಗೆ ಶೀಘ್ರವಾಗಿ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದು.

ರೇಷ್ಮೆ ಹುಳು ಸಾಕಾಣಿಕೆ

695(1323) ಶ್ರೀಮತಿ ಕಲ್ಪನಾ ಸಿದ್ದರಾಜು: ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಮದ್ದೂರು ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯುವ ರೈತರ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ನೀಡುವುದು);

ಆ ಕಳೆದ ಎರಡು ವರ್ಷಗಳಲ್ಲಿ ರೇಷ್ಮೆ ಹುಳು ಸಾಕಾಣಿಕೆಯ ಮನೆಗಳ ನಿರ್ಮಾಣಕ್ಕೆ ಸರ್ಕಾರ ಸಹಾಯಧನ ನೀಡುತ್ತಿದೆಯೇ;

ಇ ಹಾಗಿದ್ದಲ್ಲಿ, ಈವರೆವಿಗೂ ಎಷ್ಟು ಮನೆಗಳ ನಿರ್ಮಾಣಕ್ಕೆ ಸಹಾಯ ಧನವನ್ನು ನೀಡಲಾಗಿದೆ; (ಗ್ರಾಮಗಳವಾರು ವಿವರಗಳನ್ನು ನೀಡುವುದು);

ಈ ಈಗ ನೀಡುತ್ತಿರುವ ಸಹಾಯಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು ಮತ್ತು ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ವೆಂಕಟರಮಣಪ್ಪ(ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು)

ಅ ಮದ್ದೂರು ತಾಲ್ಲೂಕಿನಲ್ಲಿ 14641 ರೇಷ್ಮೆ ಬೆಳಗಾರರಿದ್ದಾರೆ. ಗ್ರಾಮವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಆ ಹೌದು.

ಇ ಮದ್ದೂರು ತಾಲ್ಲೂಕಿನ ರೇಷ್ಮೆ ಬೆಳೆಗಾರರಿಗೆ 84 ಮನೆಗಳ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ. ಗ್ರಾಮವಾರು ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.